ಜಲಾಶಯಗಳ ಬಳಿ ಉದ್ಯಾನವನಗಳನ್ನು ನಿರ್ಮಿಸುವುದು

741(779) ಶ್ರೀ ಈಶ್ವರ್ ಭೀಮಣ್ಣ ಖಂಡ್ರೆ (ಭಾಲ್ಕಿ) : ಮಾನ್ಯ ಜಲಸಂಪನ್ಮೂಲ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳುಸುವರೆ :

ಅ) ರಾಜ್ಯದ ಜಲಾಶಯಗಳಲ್ಲಿನ ನೀರಿನ ಹರಿವಿನ ಪ್ರಮಾಣವನ್ನು ಮತ್ತು ಮಟ್ಟವನ್ನು ನಿಖರವಾಗಿ ನಿಯಂತ್ರಿಸಲು ಅನುಕೂಲವಾಗುವಂತೆ ಎಲೆಕ್ಟ್ರೋ ಪ್ಲೇ ಸಿಸ್ಟಮ್ ಯೋಜನೆಯನ್ನು ಅಳವಡಿಸಲು ನಿರ್ಧರಿಸಲಾಗಿರುವುದು ನಿಜವಲ್ಲವೇ ;

ಆ) ಹಾಗಿದ್ದಲ್ಲಿ, ಎಲ್ಲೆಲ್ಲಿ, ಈ ವಿಧಾನವನ್ನು ಅಳವಡಿಸಲಾಗಿದೆ ಹಾಗೂ ಇದಕ್ಕಾಗಿ ಇಲ್ಲಿಯವರೆಗೆ ಖರ್ಚು ಮಾಡಿರುವ ಹಣವೆಷ್ಟು ; ಇದರಿಂದ ಯಾವ ಯಾವ ಉಪಯೋಗಗಳಾಗಲಿವೆ ; ಪ್ರಸಕ್ತ ಸಾಲಿನಲ್ಲಿ ಈ ವಿಧಾನವನ್ನು ರಾಜ್ಯದ ಯಾವ ಯಾವ ಜಲಾಶಯಗಳಿಗೆ ಅಳವಡಿಸಲಾಗುವುದು ;

ಇ) ಈ ವಿಧಾನವನ್ನು ಮೈಸೂರಿನ ಕೆ.ಆರ್.ಸಾಗರ ಅಣೆಕಟ್ಟು, ಆಲಮಟ್ಟಿ ಹಾಗೂ ಬೀದರ್‌ನಲ್ಲಿರುವ ಕಾರಾಂಜಾ ಜಲಾಶಯಗಳಿಗೂ ಅಳವಡಿಸುವ ಬಗ್ಗೆ ಸರ್ಕಾರ ಪರಿಶೀಲಿಸುವುದೇ ?

ಶ್ರೀ ಬಸವರಾಜ್ ಬೊಮ್ಮಾಯಿ (ಜಲಸಂಪನ್ಮೂಲ ಸಚಿವರು) :

ಅ) ಹೌದು.

ಆ) ಮತ್ತು ಇ) ರಾಜ್ಯದ ಜಲಾಶಯಗಳಾದ ಕೆ.ಆರ್.ಸಾಗರ, ಹೇಮಾವತಿ, ಹಾರಂಗಿ, ಕಬಿನಿ, ಆಲಮಟ್ಟಿ, ನಾರಾಯಣಪುರ, ತುಂಗಭದ್ರಾ, ಭದ್ರಾ ಮತ್ತು ಮಲಪ್ರಭಾಗಳಲ್ಲಿ ನೀರಿನ ಮಟ್ಟವನ್ನು ಅಳತೆ ಮಾಡಲು ಆಟೋಮೆಟೆಡ್ ವಾಟರ್ ಲೆವೆಲ್ ಮೆಜರಿಂಗ್ ಗೇಜ್‌ಗಳನ್ನು ವಿಶ್ವಬ್ಯಾಂಕ್ ನೆರವಿನ ಜಲವಿಜ್ಞಾನ ಯೋಜನೆ–2ರಡಿ ಅಳವಡಿಸಲಾಗಿರುತ್ತದೆ.

ಈ ಎಲ್ಲಾ ಉಪಕರಣಗಳನ್ನು ಸಾಫ್ಟ್‌ವೇರ್‌ನೊಂದಿಗೆ ಅಳವಡಿಸಲು ಒಟ್ಟು ಅಂದಾಜು ವೆಚ್ಚ ರೂ. 11,98,260. ಈವರೆಗೆ ರೂ. 10.50 ಲಕ್ಷಗಳಷ್ಟು ವೆಚ್ಚ ಮಾಡಲಾಗಿರುತ್ತದೆ.

ನಾಲೆಗಳ ಹರಿವಿನ ಪ್ರಮಾಣವನ್ನು ಮತ್ತು ಮಟ್ಟವನ್ನು ನಿಖರವಾಗಿ ಆನ್‌ಲೈನ್ ಮೂಲಕ ತಿಳಿದುಕೊಳ್ಳಲು ಅನುಕೂಲವಾಗುವಂತೆ ಎಲೆಕ್ಟ್ರೋ ಪ್ಲೇ

ಸಿಸ್ಟಮ್ ಯೋಜನೆ ಅಡಿಯಲ್ಲಿ ಘಟಪ್ರಭಾ ಎಡದಂಡೆ ಕಾಲುವೆ ಹಾಗೂ ಅದರಡಿಯಲ್ಲಿ ಬರುವ ಶಾಖಾ ಕಾಲುವೆಗಳ 5 ಸ್ಥಳಗಳಲ್ಲಿ ಪ್ರಾಯೋಗಿಕವಾಗಿ ಉಪಕರಣಗಳನ್ನು ಸ್ಥಾಪಿಸಲಾಗಿದೆ.

ಪ್ರಸಕ್ತ ಸಾಲಿನಲ್ಲಿ ರಾಜ್ಯದ ಎಲ್ಲಾ ಪ್ರಮುಖ ಜಲಾಶಯಗಳಲ್ಲಿ ಸದರಿ ಯೋಜನೆಯನ್ನು ತಜ್ಞ ಸಂಸ್ಥೆಗಳ ಸಹಭಾಗಿತ್ವದೊಂದಿಗೆ ಜಾರಿಗೊಳಿಸುವುದಕ್ಕೆ ಅನುದಾನವನ್ನು ಒದಗಿಸಲಾಗುವುದು.

ನೇಕಾರರ ವಸತಿ ಕಾರ್ಯಾಗಾರ

742(964) ಶ್ರೀ ಹ್ಯಾರಿಸ್ ಎನ್.ಎ. (ಶಾಂತಿನಗರ) : ಮಾನ್ಯ ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು ಈ ಕೆಳಕಂಡ ವಿಷಯಗಳನ್ನು ದಯವಿಟ್ಟು ತಿಳಿಸುವರೆ :

ಅ) ಪ್ರಸ್ತುತ ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯಡಿಯಲ್ಲಿ ನೀಡುತ್ತಿರುವ ಸಾಲ ಸೌಲಭ್ಯದ ಪ್ರಮಾಣವೆಷ್ಟು ;

ಆ) ಪ್ರಸ್ತುತ ಇರುವ 60,000 ರೂ.ಗಳನ್ನು ಹೆಚ್ಚು ಮಾಡಿ ಕನಿಷ್ಟ 1,50,000 ರೂ.ಗಳಿಗೆ ವಿಸ್ತರಿಸುವ ಉದ್ದೇಶ ಸರ್ಕಾರದ ಮುಂದಿದೆಯೇ ;

ಇ) ಕಳೆದ ಎರಡು ವರ್ಷಗಳಲ್ಲಿ ರಾಜ್ಯದಲ್ಲಿ ಎಷ್ಟು ನೇಕಾರರಿಗೆ ವಸತಿ ಕಾರ್ಯಾಗಾರ ಯೋಜನೆಯ ಸೌಲಭ್ಯವನ್ನು ಒದಗಿಸಿಕೊಡಲಾಗಿದೆ (ಜಿಲ್ಲಾವಾರು ವಿವರ ನೀಡುವುದು) ;

ಈ) ಎಲ್ಲಾ ಬಡ ನೇಕಾರರಿಗೂ ವಸತಿ ಸೌಲಭ್ಯಗಳನ್ನು ಒದಗಿಸಿ ಕೊಡುವ ನಿಟ್ಟಿನಲ್ಲಿ ಸರ್ಕಾರದ ಯೋಜನೆಗಳೇನು ?

ಶ್ರೀ ಗೋವಿಂದ ಎಂ. ಕಾರಜೋಳ (ಸಣ್ಣ ನೀರಾವರಿ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಜವಳಿ ಸಚಿವರು) :

ಅ) ಪ್ರತಿ ನೇಕಾರರಿಗೆ ಸಾಲದ ಪಾಲು ಮೊತ್ತ ರೂ.20,000 ಮತ್ತು ಸಹಾಯಧನ ಪಾಲು ರೂ. 40,000ದಂತೆ ನೀಡಲಾಗುತ್ತಿದೆ.

ಆ) ಇಲ್ಲ.

ಇ) 2008–09ನೇ ಸಾಲಿಗೆ = 00

2009–10ನೇ ಸಾಲಿಗೆ = 1943

(ಜಿಲ್ಲಾವಾರು ವಿವರ ಅನುಬಂಧದಲ್ಲಿ ಲಗತ್ತಿಸಿದೆ)